





ಅನಾವರಣಗೊಳ್ಳುತ್ತಿದೆ. ವಿಭಿನ್ನ ಲುಕ್‌ನೊಂದಿಗೆ ವಿಶೇಷ ವಿನ್ಯಾಸವನ್ನೂ ಹೊಂದಿರುವ ಉಡುಪುಗಳಿಗೆ ಈಗ ಬೇಡಿಕೆ ಕುದುರುತ್ತಿದೆ. ಫ್ಯಾಷನ್ ಜಗತ್ತಿನಲ್ಲಿ ಬಗೆಬಗೆ ಟ್ರೆಂಡ್ ಸೆಟ್ ಮಾಡುತ್ತಿರುವ ವಿನ್ಯಾಸಕರೂ ಹೊಸತನದ ದಿರಿಸುಗಳನ್ನು ಫ್ಯಾಷನ್‌ಪ್ರಿಯರಿಗಾಗಿ ನಾಜೂಕಾಗಿ ತಯಾರಿಸುತ್ತಿದ್ದಾರೆ.

ಹಿಂದೆಲ್ಲ ರಫಲ್ ತೋಳುಗಳು ಮತ್ತು ಶರ್ಟ್‌ಗಳ ಮುಂಭಾಗದಲ್ಲಿ ನೆರಿಗೆಗಳು ಹೆಚ್ಚು ಜನಪ್ರಿಯವಾಗಿತ್ತು. ಮಕ್ಕಳ ಫ್ರಾಕ್‌ಗಳಲ್ಲಿ ನೆರಿಗೆಗಳಿಗೆ ಮೇರು ಸ್ಥಾನ. ಆಧುನಿಕ ಮತ್ತು ಸಾಂಪ್ರದಾಯಿಕ ಎರಡು ಬಗೆಯ ಉಡುಪುಗಳಲ್ಲಿಯೂ ಇದು ಸ್ಥಾನ ಪಡೆದಿದೆ. ತೀರಾ ಇತ್ತೀಚೆಗೆ ರಫಲ್ ಸ್ಕರ್ಟ್, ಸೀರೆ, ಚೂಡಿದಾರಗಳು ಟ್ರೆಂಡ್ ಎನಿಸಿವೆ. ರಫಲ್ ಜೀನ್ಸ್ ಕೂಡ ಜನಪ್ರಿಯತೆ ಗಳಿಸಿಕೊಂಡಿದೆ. ಹೊಸ ವರ್ಷದ ಹೊಸ್ತಿಲಲ್ಲಿ ನವೀನ ಬಗೆಯ ಫ್ಯಾಷನ್ ಟ್ರೆಂಡ್ ಪರಿಚಯಿಸುವುದು ಫ್ಯಾಷನ್ ಕ್ಷೇತ್ರದ ಸೂತ್ರ. ಈ ಬಾರಿ ಜನಪ್ರಿಯ ಫ್ಯಾಷನ್ ವಿನ್ಯಾಸಕಾರ ಮನೀಶ್ ಮಲ್ಹೋತ್ರ ರಫಲ್ ಲೆಹೆಂಗಾ ಸ್ಕರ್ಟ್‌ನಲ್ಲಿ ಮಾಡಿರುವ ವಿನ್ಯಾಸದ ಶೋ ಮಾಡಿದ್ದರು. ಹೀಗಾಗಿ ಇದು ಫ್ಯಾಷನ್ ಕ್ಷೇತ್ರದಲ್ಲಿ ಭಾರಿ ಭರವಸೆಯನ್ನೇ ಮೂಡಿಸಿದೆ. ಈ ನೆರಿಗೆಗಳಲ್ಲಿ ಪ್ಯಾಚ್ ವರ್ಕ್ ಕೂಡ ಇರುವುದು ಸೀರೆಗೆ ಮತ್ತೊಂದು ಹೊಸ ನೋಟ ಕೊಟ್ಟಿದೆ.

ಸದ್ಯ ಹೊಸ ರೂಪಿನೊಂದಿಗೆ ಮತ್ತೆ ಫ್ಯಾಷನ್ ಜಗತ್ತನ್ನು ಆಕ್ರಮಿಸಿಕೊಂಡಿರುವ ರಫಲ್ ಉಡುಗೆಗಳನ್ನು ಸಂಭಾಳಿಸುವುದು ಕಷ್ಟ ಎನಿಸದು. ಹಗುರವಾದ ಫ್ಯಾಬ್ರಿಕ್‌ಗಳಿಂದಲೇ ಇದನ್ನು ತಯಾರಿಸುವುದರಿಂದ ತೊಟ್ಟಾಗ ಕಿರಿಕಿರಿ ಆಗುವುದಿಲ್ಲ. ಫ್ಲೋರಲ್ ಪ್ರಿಂಟ್ ತಿಳಿ ಬಣ್ಣಗಳಲ್ಲಿ ಈ ಬಗೆಯ ಸೀರೆ ದೊರಕುತ್ತವೆ.

> ಫ್ಯಾಷನ್ ಜಗತ್ತಿನಲ್ಲಿ ಕ್ಷಣಕ್ಷಣಕ್ಕೂ ಹೊಸತನ. ಹಳತು ಹೊಸತಾಗುವುದು ಫ್ಯಾಷನ್ ಕ್ಷೇತ್ರದ ಸೂತ್ರ. ಹಿಂದೆ ಹೆಚ್ಚು ಪ್ರಚಾರ ಪಡೆದಿದ್ದ 'ರಫಲ್' ವಿನ್ಯಾಸ ಬಗೆ ಬಗೆ ರೂಪು ಪಡೆದಿದೆ. ಸ್ಕರ್ಟ್, ಸೀರೆ, ಚೂಡಿದಾರಗಳಿಗೆ ಇದು ಹೊಸ ನೋಟವನ್ನು ನೀಡಿದೆ.
>
> -ಸಬ್ರಿನಾ, ವಸ್ತ್ರವಿನ್ಯಾಸಕಿ



ಆಭರಣಗಳ ಆಯ್ಕೆಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ. ಚಿನ್ನ, ಬೆಳ್ಳಿ ಅಥವಾ ಆಕ್ಸಿಡೈಸ್ಡ್ ವಿನ್ಯಾಸದ ಆಭರಣಗಳೂ ಒಪ್ಪುತ್ತವೆ. ಮಣಿಗಳಿಂದ ಮಾಡಿದ ಆಭರಣಗಳು ವಿಶೇಷ ನೋಟ ನೀಡಬಲ್ಲವು. ಆದರೆ ಅಭರದ ಆಭರಣಗಳ ಬದಲಾಗಿ ಹಗುರ ಆಭರಣಗಳು ವಿಶೇಷ ಮೆರುಗು ನೀಡುತ್ತದೆ.

ದಪ್ಪಗಿರುವವರು ಹೆಚ್ಚು ನೆರಿಗೆಗಳ ದಿರಿಸನ್ನು ಧರಿಸಿದರೆ ಇನ್ನಷ್ಟು ದಪ್ಪ ಕಾಣುತ್ತಾರೆ. ಹಾಗಾಗಿ ಒಂದೆರಡು ನೆರಿಗೆಯ ಉಡುಪನ್ನು ಆರಿಸಿಕೊಳ್ಳಿ. ಸಪೂರವಾಗಿರುವವರಿಗೆ ಈ ದಿರಿಸು ಚೆನ್ನಾಗಿ ಒಪ್ಪುತ್ತದೆ. ಫೆದರ್ ಬ್ಲೌಸ್, ಡಿಸೈನರ್ ಬ್ಲೌಸ್‌ಗಳಿಗೆ ಈ ಸೀರೆ ಒಪ್ಪುತ್ತದೆ. ಸೀರೆಯ ನೆರಿಗೆಗಳಲ್ಲೂ ಸ್ಲಿಟ್ ರಫಲ್, ಎಕ್ಸ್‌ಟ್ರೀಮ್ ಫ್ಲೇರ್, ಸೈಡ್ ರಫಲ್... ಹೀಗೆ ನಾನಾ ರೀತಿ ಇವೆ. ಸ್ಲಿಟ್ ರಫಲ್‌ನಲ್ಲಿ ಕಡಿಮೆ ನೆರಿಗೆಗಳಿರುತ್ತವೆ. ಎಕ್ಸ್‌ಟ್ರೀಮ್ ರಫಲ್‌ನಲ್ಲಿ ಹೆಚ್ಚು ಮಡಿಕೆಗಳು ಇರುತ್ತವೆ. ಈ ಬಗೆಯ ಸೀರೆಗಳಲ್ಲಿ ತಿಳಿ ಬಣ್ಣಗಳದ್ದೇ ಮೇಲುಗೈ. ಹೈ ನೆಕ್, ಬೋಟ್ ನೆಕ್ ಬ್ಲೌಸ್, ಕಾಲರ್ ನೆಕ್ ಬ್ಲೌಸ್ ಹಾಕಿದರೆ ರಫಲ್ ಸೀರೆ ಅಂದ ಹೆಚ್ಚುತ್ತದೆ. ಬ್ಲೌಸ್‌ಗೆ ಎಂಬ್ರಾಯಿಡರಿ ಕುಸುರಿ ಇಲ್ಲದಿದ್ದರೂ ಸದಾ ಎನಿಸುವುದಿಲ್ಲ. ಇಲ್ಲಿ ನೆರಿಗೆಯೇ ಹೈಲೈಟ್. ಮದುವೆ, ಸಮಾರಂಭಗಳಿಗೆ ಇಂತಹ ಸೀರೆ ಅದ್ದೂರಿ ಎನಿಸುವುದಿಲ್ಲ ಎನ್ನುವವರಿಗಾಗಿಯೇ ಕೈ ಕುಸುರಿಯಿರುವ ರಫಲ್ ಸೀರೆಗಳು ಲಭ್ಯವಿವೆ. ಇವುಗಳ ಬೆಲೆ ತುಸು ದುಬಾರಿ.

ಒಂದೇ ಬಗೆಯ ಸೀರೆ ತೊಟ್ಟು ಬೇಸರ ಬಂದಿದ್ದವರು ಈ ರಫಲ್ ಸೀರೆ ಪ್ರಯೋಗಿಸಿ ನೋಡಬಹುದು. ಈಗಿನ ಟ್ರೆಂಡ್ ಅನ್ನು ಅನುಸರಿಸುವವರಿಗೆ ಕೂಡ 'ರಫಲ್ ಸೀರೆ' ಉತ್ತಮ ಆಯ್ಕೆ. ■